ಮಂಡ್ಯ ವಿಶ್ವವಿದ್ಯಾಲಯ
ಎಂ. ಸಿ ರೋಡ್, ಮಂಡ್ಯ - ೫೭೧೪೦೧

MANDYA UNIVERSITY
M.C Road, Mandya – 571401

Ph.No.: 08232-358788, E-Mail: Registrar@mandyauniversity.ac.in, Website: www.mandyauniversity.ac.in

ಸಂಖ್ಯೆ: ಮ.ವಿ.ಮ/ಶೈಕ್ಷಣಿಕ/457/2024-25

ದಿನಾಂಕ: 07.01.2025

## -:ಸುತ್ತೋಲೆ:-

ವಿಷಯ: ಕರ್ನಾಟಕ ಸರ್ಕಾರದ ಯುವನಿಧಿ ಯೋಜನೆಯ ಅಡಿಯಲ್ಲಿ 2024ನೇ ಸಾಲಿನಲ್ಲಿ ತೇರ್ಗಡೆಯಾದ ಪದವಿ ಮತ್ತು ಸ್ನಾತಕೋತ್ತರ ಪದವಿ ಮತ್ತು ಸ್ನಾತಕೋತ್ತರ ಪದವಿ ಅಭ್ಯರ್ಥಿಗಳನ್ನು ನೋಂದಾಯಿಸುವ ಕುರಿತು.

ಉಲ್ಲೇಖ: 1. ಆಯುಕ್ತರು ಕೈಗಾರಿಕ ತರಬೇತಿ ಮತ್ತು ಉದ್ಯೋಗ ಇಲಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 02.01.2025 ರಂದು ನಡೆದ ಸಭೆಯ ತಿರ್ಮಾನ.

2. ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆ ಸಂಖ್ಯೆ: ಕಾಶಿಇ/46/ಯುವನಿಧಿ/2023-24/ವಿ.ವೇ ದಿನಾಂಕ: 03.01.2025

-******-

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ನಿರುದ್ಯೋಗಿ ಅಭ್ಯರ್ಥಿಗಳಿಗೆ ಜಾರಿಗೆ ತಂದಿರುವ "ಯುವನಿಧಿ" ಯೋಜನೆಯಡಿಯಲ್ಲಿ 2023 ರಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ಈ ಸಭೆಯಲ್ಲಿ 2023ರಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಜೊತೆ 2024ರಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳೂ ಸಹ ನೋಂದಣಿ ಮಾಡಲು ಅವಕಾಶ ನೀಡಲು ತೀರ್ಮಾನಿಸಲಾಗಿರುತ್ತದೆ. ಆದುದರಿಂದ ಮಂಡ್ಯ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿ 2024ರಲ್ಲಿ ತೇರ್ಗಡೆಯಾಗಿರುವ ಎಲ್ಲಾ ವಿದ್ಯಾರ್ಥಿಗಳು "ಯುವನಿಧಿ" ಯೋಜನೆಗೆ ನೋಂದಣಿ ಮಾಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಈ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ವ್ಯಾಪಕ ಪ್ರಚಾರ ನೀಡಲು ಕ್ರಮಕೈಗೊಳುವುದು, ಇದರಲ್ಲಿ ಕೇಬಲ್ ಟಿವಿ, ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಳ್ಳುವುದು, ಯುವನಿಧಿ ಯೋಜನೆಯ ಕುರಿತಾದ ಪೋಸ್ಟರ್‌ಗಳನ್ನು ಅಳವಡಿಸುವುದು. ಯೋಜನೆಗೆ ಅರ್ಜಿ ಸಲ್ಲಿಸಲು ತಮ್ಮ ತಮ್ಮ ಕಾಲೇಜುಗಳ ಅಂತರ್ಜಾಲಗಳಲ್ಲಿ ಲಿಂಕ್‌ಅನ್ನು ಸೇರ್ಪಡೆ ಮಾಡುವುದು.

"ಯುವನಿಧಿ" ಯೋಜನೆಯಲ್ಲಿ ಅರ್ಜಿ ಸಲ್ಲಿಸುವಂತೆ 2024ನೇ ವರ್ಷದಲ್ಲಿ ತೇರ್ಗಡೆಯಾದ ವಿದ್ಯಾಥಿಗಳಿಗೆ ಕಿರು ಸಂದೇಶ ಅಥವಾ whatsapp ಅಥವ ಈ-ಮೇಲ್ ಮುಖಾಂತರ ಸಂದೇಶಗಳನ್ನು ಕಡ್ಡಾಯವಾಗಿ ಕಳುಹಿಸುವುದು, ತಮ್ಮ ತಮ್ಮ ಕಾಲೇಜುಗಳಲ್ಲಿ "ಯುವನಿಧಿ" ನೋಂದಣಿ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಯುವನಿಧಿ ನೋಡಲ್ ಅಧಿಕಾರಿಯನ್ನು ನೇಮಿಸುವುದರ ಜೊತೆಗೆ ಸಂಬಂಧಪಟ್ಟ ಇಲಾಖೆಗಳು ಸಿದ್ದಪಡಿಸಿರುವ ಪ್ರಚಾರ ಸಾಮಗ್ರಿಗಳ softcopy ಗಳನ್ನು ನೋಡಲ್ ಅಧಿಕಾರಿಗಳಿಂದ ಪಡೆದು ವ್ಯಾಪಕ ಪ್ರಚಾರ ನೀಡಲು ಕ್ರಮ ತೆಗೆದುಕೊಳ್ಳಬೇಕೆಂದು ಸಹ ಈ ಮೂಲಕ ತಿಳಿಸಲಾಗಿದೆ.

ದಿನಾಂಕ 06.01.2025 ರಿಂದ 20.01.2025 ಅವಧಿಯಲ್ಲಿ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ನೋಡಲ್ ಅಧಿಕಾರಿಗಳು ಹೆಚ್ಚು ಜನ ನೋಂದಣಿಯಾಗುವಂತೆ ನೋಡಿಕೊಳಲು ಹೆಚ್ಚು ಗಮನ ಹರಿಸಬೇಕೆಂಬ ಸರ್ಕಾರದ ಸೂಚನೆಯನ್ನು ಪಾಲಿಸಲು ಕೋರಿದೆ.

I/C [signature] 07/01/2025
ಕುಲಸಚಿವರು

ಕುಲಸಚಿವರು
ಮಂಡ್ಯ ವಿಶ್ವವಿದ್ಯಾಲಯ
ಮಂಡ್ಯ - 571401.

ಇವರಿಗೆ,

1. ಮಂಡ್ಯ ವಿಶ್ವವಿದ್ಯಾಲಯಲಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಪ್ರಾಂಶುಪಾಲರು, ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ), ಮಂಡ್ಯ.

ಪ್ರತಿಗಳು:

1. ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ.
2. ಆಯುಕ್ತರು ಕೈಗಾರಿಕ ತರಬೇತಿ ಮತ್ತು ಉದ್ಯೋಗ ಇಲಾಖೆ, ಕೌಶಲ್ಯ ಭವನ, ಬೆಂಗಳೂರು-560029.
3. ಡಾ.ಎಂ.ಸಿ ಗಿರೀಶ, ಸಹ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಯುವನಿಧಿ ಸಂಯೋಜನಾಧಿಕಾರಿಗಳು, ಮ.ವಿ.ಮ.
4. ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು(ಮೌಲ್ಯಮಾಪನ) ರವರ ಆಪ್ತ ಕಾರ್ಯಾಲಯ, ಮ.ವಿ.ಮ.
5. ಕಛೇರಿ ಪ್ರತಿ.